# ಹುಲಿ ಸವಾರಿ!

'He who rides a tiger, cannot dismount' ಎಂಬುದು ಇಂಗ್ಲಿಷ್ ಭಾಷೆಯಲ್ಲಿ ಪ್ರಚಲಿತವಾಗಿರುವ ಒಂದು ಪ್ರಸಿದ್ಧ ಹೇಳಿಕೆ. 'ಹುಲಿಯ ಸವಾರ ಕೆಳಗಿಳಿಯಲಾರ' ಎಂದು ಇದರ ಅರ್ಥ. ಹುಲಿಯನ್ನು ಸವಾರಿ ಮಾಡುವುದೆಂದರೆ, ಅದೊಂದು ದುಸ್ಸಾಹಸದ ಕೆಲಸ. ಹುಂಬತನ, ಕುರುಡು ಆತ್ಮವಿಶ್ವಾಸ, ಮಹತ್ವಾಕಾಂಕ್ಷೆಯ ವೇಷಧರಿಸಿರುವ ದುರಾಶೆ –ಇಂಥವೆಲ್ಲ ಆ ಸಾಹಸದ ಹಿಂದಿರುವ ಪ್ರೇರಣೆಗಳು. ಯಾರೋ ಒಬ್ಬಾತ ಹುಂಬ ಧೈರ್ಯದಿಂದ ಪರಿಣಾಮವನ್ನು ಕುರಿತು ಪರ್ಯಾಲೋಚಿಸದೇ ಯಾವುದೋ ತಂತ್ರದಿಂದ ಹುಲಿಯ ಬೆನ್ನೇರಿ ಕುಳಿತಿದ್ದಾನೆ– ಎಂದು ಕೊಳ್ಳಿ. ಆಗ ಏನಾದೀತು? ಅತ್ಯಂತ ಕ್ರೂರಿಯಾಗಿರುವ ಹುಲಿ ಇಂಥ ಆಕ್ರಮಣವನ್ನು ಸಹಿಸಿಕೊಂಡೀತೆ? ಸಾಧ್ಯವೇ ಇಲ್ಲ. ಅದು ತನ್ನ ಮೇಲೆ ಕುಳಿತಿರುವ ಸವಾರನನ್ನು ಕೆಳಗೆ ಕಡೆವಿ, ಧ್ವಂಸ ಮಾಡಲು ಪ್ರಯತ್ನಿಸುತ್ತದೆ. ಸವಾರನಿಗೂ ಈ ಅಪಾಯದ ಅರಿವಾಗುತ್ತದೆ. ಏನಾದರೂ ಸರಿಯೆ, ತಾನು ಹುಲಿಯ ಬೆನ್ನಿಂದ ಕೆಳಕ್ಕೆ ಇಳಿಯಲೇಬಾರದು ಎಂದು ಆತ ಪ್ರಯತ್ನಿಸುತ್ತಾನೆ.

ಪ್ರಚಲಿತ ರಾಜಕೀಯ ಸಂದರ್ಭದಲ್ಲಿ, ನಮ್ಮ ನಾಯಕರೆನ್ನಿಸಿಕೊಂಡವರ ಪರಿಸ್ಥಿತಿಯನ್ನು ಗಮನಿಸಿದಾಗ, 'ಹುಲಿ ಸವಾರಿ' ಎಂಬುದು ಅವರ ಸ್ಥಿತಿಗೆ ಅನ್ವಯವಾಗಬಹುದಾದ ಸೂಕ್ತ ರೂಪಕ ವೆನ್ನಿಸುವುದಿಲ್ಲವೆ? ಅಧಿಕಾರ, ಹಣದ ಆಶೆ, ಸ್ವಾರ್ಥ, ಸ್ವಜನ ಪಕ್ಷಪಾತ– ಇಂಥ ಹಲವು ಪ್ರೇರಣೆಗಳಿಂದ ರಾಜಕೀಯಕ್ಕೆ ಬಂದು, ಅಧಿಕಾರವೆಂಬ ಹುಲಿಯ ಬೆನ್ನೇರಿ ಅವರು ಸವಾರಿ ಮಾಡುತ್ತಿದ್ದಾರೆ. ಆ ಅಧಿಕಾರ ಇರುವಷ್ಟು ದಿವಸ ಅವರ ಭ್ರಷ್ಟಾಚಾರ ಹಾಗೂ ಇನ್ನಿತರ ಅನೈತಿಕ ಕ್ರಿಯೆಗಳು– ಎಲ್ಲವನ್ನೂ ನಿಭಾಯಿಸಲು ಅವರಿಗೆ ಸಾಧ್ಯವಾಗುತ್ತದೆ. ಅಧಿಕಾರವೇನಾದರೂ ಕೈ ತಪ್ಪಿಹೋದರೆ, ತಾವು ಸರ್ವನಾಶವಾಗಬಹುದೆಂಬ ಭಯ ಅವರನ್ನು ಕಾಡುತ್ತಲೇ ಇರುತ್ತದೆ. ಹೀಗಾಗಿ ಅಧಿಕಾರವನ್ನುಳಿಸಿಕೊಳ್ಳುವ ಸಲುವಾಗಿ ಇನ್ನಷ್ಟು ಕುಟಿಲೋಪಾಯ, ಮತ್ತಷ್ಟು ಭ್ರಷ್ಟಾಚಾರ, ಎಷ್ಟೆಷ್ಟೋ ಅನ್ಯಾಯಗಳು ಅವರ ತಂತ್ರಗಾರಿಕೆಯ ಬತ್ತಳಿಕೆಯಿಂದ ಹೊರಬರುತ್ತಲೇ ಇರುತ್ತವೆ. ಪಟಾಕಿಯ ಸರದಲ್ಲಿ ಒಂದು ತುದಿಗೆ ಬೆಂಕಿ ಇಟ್ಟರೆ, ಒಂದಕ್ಕೊಂದು ತಗುಲಿ ಸರದಲ್ಲಿರುವ ಎಲ್ಲ ಪಟಾಕಿಗಳೂ ಸ್ಫೋಟಿಸುವಂಥ ಸರಪಳಿ ಕ್ರಿಯೆ ಇಲ್ಲಿಯೂ ಘಟಿಸುತ್ತದೆ.

ಕೆಲವೊಮ್ಮೆ ರಾಜಕೀಯ ಕ್ಷೇತ್ರದಲ್ಲಲ್ಲದೆ, ಇತರ ಕ್ಷೇತ್ರಗಳಲ್ಲೂ ಇಂಥ 'ಹುಲಿ ಸವಾರ'ರಿರುವುದನ್ನು ನೋಡಬಹುದು. ತಾವು ಮಹಾತ್ಮರು, ದೇವ ಮಾನವರು, ತ್ರಿಕಾಲ ಜ್ಞಾನಿಗಳು, ಪವಾಡ ಪುರುಷರು– ಎಂದೆಲ್ಲ ಹೇಳಿಕೊಂಡು ಸಮಾಜವನ್ನು ವಂಚಿಸುವ ಆಷಾಢಭೂತಿಗಳು ಈ ಗುಂಪಿನವರೇ. ತಮ್ಮ ಮಾತಿನ ಮೋಡಿಯಿಂದಲೋ, ಯಾವುದೋ ಚಮತ್ಕಾರದಿಂದಲೋ ಅಮಾಯಕರನ್ನು ಮರುಳು ಮಾಡಿ, ತಮ್ಮ ಸುತ್ತ ಅಲೌಕಿಕವೆನ್ನಿಸುವ ಛದ್ಮ ಪರಿವೇಷವನ್ನು ಕಟ್ಟಿಕೊಂಡಿರುವ ಇಂಥವರು ತಮ್ಮ ನಿಜ ಸ್ವರೂಪ ಬಯಲಾಗಬಾರದೆಂದು ಅತೀವ ಕಾಳಜಿವಹಿಸುತ್ತಾರೆ. ಹಾಗಾಗಿ ಹಗಲೂ ರಾತ್ರಿ ಮುಖವಾಡವನ್ನು ಧರಿಸಿಕೊಂಡೇ ಬದುಕಬೇಕಾದ ಅನಿವಾರ್ಯತೆ ಅವರದಾಗುತ್ತದೆ. ಈ ಅನಿವಾರ್ಯತೆಯಿಂದಾಗಿ ಮತ್ತಷ್ಟು ಬೂಟಾಟಿಕೆ, ನಾಟಕ, ತಂತ್ರಗಾರಿಕೆ– ಇತ್ಯಾದಿಗಳನ್ನು ಬಳಸಿ, 'ಹುಲಿ ಸವಾರಿ'ಯನ್ನು ಸಾಧ್ಯವಾದಷ್ಟು ಕಾಲ ನಿಭಾಯಿಸುತ್ತಾರೆ.

ಮಹತ್ವಾಕಾಂಕ್ಷೆ ಇರಬೇಕು, ನಿಜ. ಏಕೆಂದರೆ ಅದರಿಂದಾಗಿ ವ್ಯಕ್ತಿ ಜೀವನದಲ್ಲಿ ಹಾಗೂ ಸಮುದಾಯದಲ್ಲಿ ಪ್ರಗತಿ ಕಾಣಿಸಿಕೊಳ್ಳುತ್ತದೆ, ಆದರೆ ಅದು ದುರಾಶೆಯಿಂದ ಕಲುಷಿತಗೊಳ್ಳಬಾರದು; ದುಸ್ಸಾಹಸಕ್ಕೆ, ದೌಷ್ಟ್ಯಕ್ಕೆ ಕಾರಣವಾಗಬಾರದು. ತನ್ನೊಬ್ಬನ ಮಹತ್ವಾಕಾಂಕ್ಷೆಯಿಂದ ತಾನು ಬದುಕಿರುವ ಸಮುದಾಯಕ್ಕೆ ಯಾವುದೇ ರೀತಿಯ ಹಾನಿಯಾಗಬಾರದೆಂಬ ಎಚ್ಚರ ಮಹತ್ವಾಕಾಂಕ್ಷಿಗೆ ಇರಬೇಕಾದುದು ತೀರಾ ಅಗತ್ಯ. ನಾಯಕನಾದವನೊಬ್ಬ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದರ ಮೂಲಕ ತನ್ನನ್ನು ತಾನು ಕಾಪಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬಂದಾಗ, ಆತ ಕ್ರಮೇಣ ಹಿಂಸ್ರ ಪಶುವಾಗುತ್ತಾನೆ; ಪ್ರಜಾಚಿಂತಕ ಎಂಬ ವೇಷ ಧರಿಸಿಕೊಂಡ ಸರ್ವಾಧಿಕಾರಿಯಾಗುತ್ತಾನೆ. ನ್ಯಾಯ, ಧರ್ಮ, ನೀತಿ, ಮೌಲ್ಯ, ಕಾನೂನು– ಎಲ್ಲವೂ ಶಬ್ದಕೋಶದಲ್ಲಿ ಮಾತ್ರ ಉಳಿಯುವಂತಾಗುತ್ತದೆ; ದುರ್ಯೋಧನ, ಹಿಟ್ಲರ್– ಮುಂತಾದವರ ಲಕ್ಷಣಗಳು ಸ್ಪಷ್ಟವಾಗಿ ಆತನಲ್ಲಿ ಕಾಣಿಸಿಕೊಳ್ಳುತ್ತವೆ. ಅಂಥವನನ್ನೇ ಮಂಕುತಿಮ್ಮ– 'ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿನ್ನುದ್ಧಾರ ವೆಷ್ಟಾಯ್ತೋ?' ಎಂದು ಪ್ರಶ್ನಿಸಿರುವುದು.

■ ವೈನತೇಯ

## ಮಾತೇ ಮುತ್ತು

★ ಒಳ್ಳೆಯ ನಡತೆಗೆ ಇತರರ ಒಳ್ಳೆಯ ನಡತೆಯ ಊರುಗೋಲು ಬೇಕು.
-ಎಮರ್‌ಸನ್

★ ಮಾಡಿರುವ ಎಲ್ಲವನ್ನೂ ಕಾಲ ಹಾಳು ಮಾಡುತ್ತದೆ; ಮಾಡಬೇಕಾದದ್ದೆಲ್ಲವನ್ನೂ ನಾಲಿಗೆ ಹಾಳು ಮಾಡುತ್ತದೆ.
-ಜರ್ಮನಿ ಗಾದೆ

★ ಭ್ರಷ್ಟಾಚಾರ ಜಾತ್ಯತೀತ! ಅದಕ್ಕೆ ಜಾತಿ ಇಲ್ಲ. ಎಲ್ಲ ಜಾತಿಯಲ್ಲೂ ಭ್ರಷ್ಟರಿದ್ದಾರೆ. ಜಾತಿ ಹೆಸರೇಳಿಕೊಳ್ಳುವ ಭ್ರಷ್ಟರಿಗೆ ಪ್ರಾಮಾಣಿಕವಾದ ಜಾತಿ ಪ್ರೀತಿ ಇರುವುದೇ ಇಲ್ಲ!
-ಅನುಭವಾಮೃತ

★ ಮನಸ್ಸು ಕನ್ನಡಿಯಂತಿರಬೇಕು, ಕ್ಯಾಮೆರಾದ ರೀಲ್‌ನಂತಲ್ಲ.
-ಮುನಿಶ್ರೀ ತರುಣ ಸಾಗರ್‌ಜಿ

★ ಕಾನೂನು ನಾಗರಿಕತೆಯ ಸಾಧನವಾದಾಗ ಮಾತ್ರ ಭಾರತೀಯ ಭೂಭಾಗದಲ್ಲಿ ಶಾಂತಿ ನೆಲೆಸುವುದು ಸಾಧ್ಯ.
-ಬಿ.ಆರ್.ಅಂಬೇಡ್ಕರ್

★ ಬಡವರಿಗಿರುವ ಸೌಲಭ್ಯವೇ ನಾಗರಿಕತೆಯ ಅಳತೆಗೋಲು.
-ಡಾ.ಜಾನ್‌ಸನ್

★ ನಷ್ಟ ಎನ್ನುವುದು ಲಾಭದ ಅಣ್ಣ.
-ರಷ್ಯಾ ಗಾದೆ

★ ಕಾಲ(ಸಮಯ)ಕ್ಕೆ ನಾವೆಲ್ಲ ಅಧೀನರು, ಕಾಲವನ್ನು ಮೀರಲಾಗದು.
-ಸಾಣೆಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ

★ ನಿಧಾನವಾಗಿ ನ್ಯಾಯ ಕೊಡುವುದೆಂದರೆ ನ್ಯಾಯ ಕೊಡದಿರುವುದೆಂದೇ.
-ಇಂಗ್ಲಿಷ್ ಗಾದೆ

★ಒಳ್ಳೆಯ ಕೋರ್ಟು ವ್ಯವಹಾರಕ್ಕಿಂತ ಕೆಟ್ಟ ಒಪ್ಪಂದ ಲೇಸು.
-ಇಟಲಿ ಗಾದೆ

★ ಆಕಾಶವನಡರುವವನಿಗೆ ಅಟ್ಟಗೋಲ ಹಂಗೇಕೆ? ಸಮುದ್ರವ ದಾಟುವವನಿಗೆ ಹರಿಗೋಲ ಹಂಗೇಕೆ?
-ಅಲ್ಲಮ ಪ್ರಭು

★ ನೊಂದ ಬಾಯಿಗೆ ನಿಂದೆ ಪರಮಾನ್ನ!
-ಎಸ್.ವಿ.ರಂಗಣ್ಣ

★ ಒಬ್ಬ ಮನುಷ್ಯನನ್ನು ಕೊಂದರೆ ದೇವರ ಪ್ರತಿಬಿಂಬವನ್ನು ನಾಶ ಮಾಡಿದಂತೆ; ಒಳ್ಳೆಯ ಪುಸ್ತಕವನ್ನು ನಾಶ ಮಾಡಿದರೆ ಮನುಷ್ಯನ ಸಕಾರಣತೆಯನ್ನೇ ಕೊಂದಂತೆ.
-ಜಾನ್ ಮಿಲ್ಟನ್

★ ಪ್ರತಿಭೆಗೆ ಶಾಸ್ತ್ರಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.
-ತರಾಸು

★ ಪ್ರಕಾಶಕರಿಗೆ ನಷ್ಟ ಉಂಟುಮಾಡಿರುವ ಪುಸ್ತಕಗಳಿಂದಲೇ ಪಾಂಡಿತ್ಯ ಮುಂದುವರೆದಿರುವುದು!.
-ಥಾಮಸ್ ಫುಲ್ಲರ್

★ ಹುಚ್ಚಿನ ಅಂಶ ಇಲ್ಲದ ಪ್ರತಿಭಾವಂತ ಇಲ್ಲ.
-ಸೆನಕ

★ ಪ್ರತಿಭಾ ಶಾಲಿ ತಪ್ಪು ಮಾಡುವುದಿಲ್ಲ. ಅವನ ದೋಷಗಳೂ ಹೊಸ ಶೋಧನೆಗಳ ಹೆಬ್ಬಾಗಿಲಾಗುತ್ತವೆ.
-ಜೇಮ್ಸ್ ಜಾಯ್ಸ್